# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ, ಕುಮಟಾ.

**ಸಿ.ಸಿ.ನಂಃ 611–2013**

**ಫಿರ್ಯಾದಿಃ ಸರ್ಕಾರ - ವಿ - ಆರೋಪಿತರುಃ** 1) ನಾಗವೇಣಿ
ಮತ್ತು ಇನ್ನೊಬ್ಬರು

## ದೋಷಾರೋಪಣೆ

ಶ್ರೀಮತಿ ರೂಪಶ್ರೀ ಬಿ.ಕಾಮ್. ಎಲ್ಎಲ್.ಬಿ., ಪ್ರ. ದ. ನ್ಯಾ. ದಂಡಾಧಿಕಾರಿ ಕುಮಟಾ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪ ಹೊರಿಸುತ್ತಿದ್ದೇನೆಃ

1) ನಾಗವೇಣಿ ಕಾಮೇಶ್ವರ ಅಂಬಿಗ ಸಾಃಅಳ್ವೆಕೋಡಿ ಕುಮಟಾ
2) ರಾಮರಾಯ ನಾರಾಯಣ ಅಂಬಿಗ, ಕೋಡ್ಕಣಿ ಕುಮಟಾ

ಕುಮಟಾ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕುಮಟಾ ಶಹರದ ನಾಗದೇವಿ ರಸ್ತೆ ಕುಮಟಾದಲ್ಲಿ ಆರೋಪಿತರಾದ ನೀವು ಕೂಡಿಕೊಂಡು ಒಳಸಂಚು ರೂಪಿಸಿ ಮೋಸ ಹಾಗೂ ನಂಬಿಕೆದ್ರೋಹ ಮಾಡಿ ಫಿರ್ಯಾದಿ ಚಂದ್ರಕಲಾ ಇವರ ತಂಗಿ ಶ್ರೀಮತಿ ಯಮೂನಾ ಇವರಿಗೆ ನೌಕರಿ ಕೊಡಿಸುತ್ತೇನೆ ಅಂತಾ ಹೇಳಿ ಫಿರ್ಯಾದಿದಾರರಿಂದ ಹಾಗೂ ಸಾಕ್ಷಿ ನಂ 8 ಶ್ರೀಮತಿ ಲಕ್ಷ್ಮೀ ಮತ್ತು 9 ವಿದ್ಯಾದರ ಇವರಿಂದ ನಗದು ಹಣ ಹಾಗೂ ಚೆಕ್ ಮೂಲಕ ಹಣವನ್ನು ಪಡೆದುಕೊಂಡು ಸಾಕ್ಷಿ ನಂ 10 ಮತ್ತು 11 ರವರಿಗೆ ನೌಕರಿಯನ್ನು ಕೊಡಿಸದೇ ಹಣವನ್ನು ಪರತ್ ನೀಡದೇ ಹಣವನ್ನು ನಿಮ್ಮ ಸ್ವಂತ ಖರ್ಚಿಗಾಗಿ ಬಳಸಿಕೊಂಡು, ಅಪರಾಧಿಕ ಒಳಸಂಚು ಹಾಗೂ ದುರ್ವಿನಿಯೋಗ ಮಾಡಿ, ನಂಬಿಕೆದ್ರೋಹಪಡಿಸಿ ಫಿರ್ಯಾದಿದಾರರಿಗೆ ಹಾಗೂ ಸಾಕ್ಷಿ ನಂ 8ರಿಂದ 11 ಇವರಿಗೆ ಮೋಸಪಡಿಸಿ ನಂಬಿಕೆದ್ರೋಹ ಮಾಡಿ **ಭಾರತ ದಂಡ ಸಂಹಿತೆ ಕಲಂ 403, 406, 420 ,201, 120(ಬಿ), 411 ಸಹ ಕಲಂ 34ರಡಿ ಶಿಕ್ಷಾರ್ಹ** ಅಪರಾಧವೆಸಗಿರುತ್ತೀರಿ ಎಂಬುದಾಗಿ ಆಪಾದಿಸಲಾಗಿದೆ.

ನೀವು ಮೇಲಿನ ಆರೋಪಗಳಡಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

**ತಾಃ3-09-2015.**

**( ರೂಪಶ್ರೀ )**
**ಪ್ರ ದ ನ್ಯಾ ದಂಡಾಧಿಕಾರಿ, ಕುಮಟಾ.**